# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1446

ಉತ್ತರಿಸುವ ದಿನಾಂಕ : 30-12-2022

ಸದಸ್ಯರ ಹೆಸರು : ಶ್ರೀ.ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ಸಚಿವರು : ಕೃಷಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಮೂರು ವರ್ಷಗಳಲ್ಲಿ ಕೃಷಿ ಕ್ಷೇತ್ರದ ಅಭಿವೃದ್ಧಿ ನಿರ್ವಹಣೆ ಹಾಗೂ ಕಾರ್ಯಚಟುವಟಿಕೆಗಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಬಿಡುಗಡೆಗೊಂಡಿರುವ ಅನುದಾನವೆಷ್ಟು; (ವಿಧಾನಸಭಾ ಕ್ಷೇತ್ರವಾರು, ವಾರ್ಷಿಕವಾರು ಲೆಕ್ಕಶೀರ್ಷಿಕೆವಾರು ಫಲಾನುಭವಿವಾರು ಸಂಪೂರ್ಣ ಮಾಹಿತಿ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಕೃಷಿ ಕ್ಷೇತ್ರದ ಅಭಿವೃದ್ಧಿ ನಿರ್ವಹಣೆ ಹಾಗೂ ಕಾರ್ಯಚಟುವಟಿಕೆಗಾಗಿ ಶಿವಮೊಗ್ಗ ಜಿಲ್ಲೆಗೆ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ವಿಧಾನಸಭಾ ಕ್ಷೇತ್ರವಾರು, ವಾರ್ಷಿಕವಾರು ಮತ್ತು ಲೆಕ್ಕಶೀರ್ಷಿಕೆವಾರು ಬಿಡುಗಡೆಗೊಂಡಿರುವ ಅನುದಾನದ ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ. . ಫಲಾನುಭವಿಗಳ ವಿವರಗಳನ್ನು ಸಿ.ಡಿ.ಯಲ್ಲಿ ಒದಗಿಸಲಾಗಿದೆ. |
| ಆ) | ಬಿಡುಗಡೆಗೊಂಡ ಅನುದಾನದಲ್ಲಿ ಕೈಗೊಂಡ ಕಾರ್ಯಕ್ರಮಗಳಾವುವು; (ಸಂಪೂರ್ಣ ಮಾಹಿತಿ ನೀಡುವುದು) | ಬಿಡುಗಡೆಗೊಂಡ ಅನುದಾನದಲ್ಲಿ ಕೈಗೊಂಡ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಿದೆ. |
| ಇ) | ಪ್ರಸ್ತುತ ಶಿವಮೊಗ್ಗ ಜಿಲ್ಲೆಯಲ್ಲಿರುವ ರೈತ ಸಂಪರ್ಕ ಕೇಂದ್ರಗಳೆಷ್ಟು; (ತಾಲ್ಲೂಕುವಾರು ವಿವರ ನೀಡುವುದು) | ಪ್ರಸ್ತುತ ಶಿವಮೊಗ್ಗ ಜಿಲ್ಲೆಯಲ್ಲಿರುವ ರೈತ ಸಂಪರ್ಕ ಕೇಂದ್ರಗಳು 40. ತಾಲ್ಲೂಕುವಾರು ವಿವರಗಳನ್ನು ಅನುಬಂಧ-3ರಲ್ಲಿ ಒದಗಿಸಲಾಗಿದೆ. |
| ಈ) | ಶಿವಮೊಗ್ಗ ಜಿಲ್ಲೆಯಲ್ಲಿ ರೈತರಿಗೆ ಕೃಷಿ ಯೋಜನೆಗಳ ಬಗ್ಗೆ ಸರಿಯಾದ ಮಾಹಿತಿ ನೀಡದಿರುವ ಅಧಿಕಾರಿ/ಸಿಬ್ಬಂದಿ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | ಶಿವಮೊಗ್ಗ ಜಿಲ್ಲೆಯಲ್ಲಿ ರೈತರಿಗೆ ಕೃಷಿ ಯೋಜನೆಗಳ ಬಗ್ಗೆ ಸರಿಯಾದ ಮಾಹಿತಿ ನೀಡದಿರುವ ಅಧಿಕಾರಿ/ಸಿಬ್ಬಂದಿ ವಿರುದ್ಧ ಯಾವುದೇ ದೂರು ಸ್ವೀಕೃತವಾಗಿರುವುದಿಲ್ಲ. |

ಸಂಖ್ಯೆ : AGRI –AML/290/2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

## LAQ -1446 ಅನುಬಂಧ -1

### 2019-20ನೇ ಸಾಲಿನಲ್ಲಿ ಕೃಷಿ ಕ್ಷೇತ್ರದ ಅಭಿವೃದ್ಧಿ ನಿರ್ವಹಣೆ ಹಾಗೂ ಕಾರ್ಯಚಟುವಟಿಕೆಗಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಬಿಡುಗಡೆಗೊಂಡಿರುವ ಅನುದಾನದ ವಿವರ (ರೂ.ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆ ಮತ್ತು ಲೆಕ್ಕ ಶೀರ್ಷಿಕೆ | ಶಿವಮೊಗ್ಗ ನಗರ | ಶಿವಮೊಗ್ಗ ಗ್ರಾಮಾಂತರ | ಭದ್ರಾವತಿ | ತೀರ್ಥಹಳ್ಳಿ | ಸಾಗರ | ಶಿಕಾರಿಪುರ | ಸೊರಬ | ಒಟ್ಟು |
|---|---|---|---|---|---|---|---|---|---|
| 1 | ಕೃಷಿ ಆಯುಕ್ತಾಲಯ (2401-00-001-1-01) | 29.73 | 36.47 | 1.06 | 16.47 | 22.85 | 1.18 | 32.62 | 140.39 |
| 2 | ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ (2401-00-001-1-75) | 1.87 | 17.37 | 14.92 | 3.31 | 0.40 | 22.42 | 20.83 | 81.11 |
| 3 | ಕೃಷಿ ಭಾಗ್ಯ 2401-00-102-0-28 | 4.45 | 26.63 | 8.16 | 29.44 | 47.91 | 19.55 | 32.26 | 168.40 |
| 4 | ರೈತರ ಪ್ರೋತ್ಸಾಹ & ಬೆಂಬಲ ಯೋಜನೆಗಳು (2401-00-102-0-28) | 7.15 | 44.29 | 15.85 | 77.09 | 62.77 | 77.58 | 30.88 | 315.60 |
| 6 | ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ (2401-00-103-0-15) | 70.24 | 207.86 | 120.66 | 113.12 | 161.70 | 297.01 | 331.86 | 1302.45 |
| 8 | ಸಾವಯವ ಕೃಷಿ (2401-00-104-0-12) | 1.84 | 15.17 | 11.04 | 12.80 | 14.30 | 11.03 | 13.75 | 79.92 |
| 9 | ಕೃಷಿ ವಿಸ್ತರಣೆ ಮತ್ತು ತರಬೇತಿ (2401-00-109-0-21) | 26.98 | 25.30 | 12.37 | 25.71 | 36.44 | 19.21 | 25.73 | 171.73 |
| 10 | ಕೃಷಿ ಮೂಲಭೂತ ಸೌಕರ್ಯ (4401-00-001-1-01) | 0.00 | 0.00 | 0.00 | 0.00 | 0.00 | 0.00 | 0.00 | 0.00 |
| | **ರಾಜ್ಯ ವಲಯ ಯೋಜನೆಗಳ - ಒಟ್ಟು** | **142.26** | **373.09** | **184.05** | **277.93** | **346.37** | **447.99** | **487.92** | **2259.61** |
| **II** | **ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು** | 6.16 | 2.09 | 3.23 | 2.87 | 5.10 | 1.96 | 2.16 | 23.56 |
| **III** | **ಕೇಂದ್ರ ವಲಯ/ಪುರಸ್ಕೃತ ಯೋಜನೆಗಳು** | | | | | | | | |
| 1 | ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ (2401-00-102-0-08) | 8.44 | 32.96 | 12.35 | 16.54 | 24.98 | 64.65 | 65.89 | 225.82 |
| 2 | NMSA-ಮುಖ್ಯಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆ (2401-00-108-1-15) | 53.26 | 326.83 | 112.39 | 219.22 | 515.12 | 933.45 | 754.21 | 2914.49 |
| 3 | NMSA - ಇತರೆ ಘಟಕಗಳು-2401-00-108-1-16 | 2.97 | 22.43 | 14.07 | 16.92 | 20.02 | 18.86 | 14.86 | 110.15 |
| 4 | ಕೃಷಿ ವಿಸ್ತರಣೆ ಉಪ ಅಭಿಯಾನ (SMAE)-2401-00-109-0-34 | 0.00 | 0.00 | 0.00 | 0.00 | 0.00 | 0.00 | 0.00 | 0.00 |
| 5 | ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM)2401-00-113-0-02 | 22.33 | 140.33 | 53.23 | 58.82 | 126.03 | 173.01 | 236.37 | 810.13 |
| 6 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY) (2401-00-800-1-57) | 1.56 | 10.92 | 5.80 | 4.92 | 7.84 | 23.29 | 22.69 | 77.04 |
| 7 | ಮಣ್ಣಿನ ಫಲವತ್ತತೆಯ ಯೋಜನೆ/ಮಣ್ಣು ಆರೋಗ್ಯ ಚೀಟಿ & ನಿರ್ವಹಣೆ (Soil Health Card/Management)-2402-00-101-0-03 | 0.00 | 0.00 | 0.00 | 0.00 | 0.00 | 0.00 | 0.00 | 0.00 |
| | **ಕೇಂದ್ರ ವಲಯ/ಪುರಸ್ಕೃತ ಯೋಜನೆಗಳು - ಒಟ್ಟು** | **88.57** | **533.48** | **197.85** | **316.43** | **694.00** | **1213.27** | **1094.03** | **4137.62** |
| | ಎಲ್ಲಾ ಒಟ್ಟು | **236.99** | **908.65** | **385.14** | **597.23** | **1045.46** | **1663.21** | **1584.10** | **6420.79** |

**LAQ -1446 ಅನುಬಂಧ -1**

**2020-21ನೇ ಸಾಲಿನಲ್ಲಿ ಕೃಷಿ ಕ್ಷೇತ್ರದ ಅಭಿವೃದ್ಧಿ, ನಿರ್ವಹಣೆ ಹಾಗೂ ಕಾರ್ಯಚಟುವಟಿಕೆಗಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಬಿಡುಗಡೆಗೊಂಡಿರುವ ಅನುದಾನದ ವಿವರ (ರೂ.ಲಕ್ಷಗಳಲ್ಲಿ)**

| ಕ್ರ. ಸಂ | ಯೋಜನೆ ಮತ್ತು ಲೆಕ್ಕ ಶೀರ್ಷಿಕೆ | ಶಿವಮೊಗ್ಗ ನಗರ | ಶಿವಮೊಗ್ಗ ಗ್ರಾಮಾಂತರ | ಭದ್ರಾವತಿ | ತೀರ್ಥಹಳ್ಳಿ | ಸಾಗರ | ಶಿಕಾರಿಪುರ | ಸೊರಬ | ಒಟ್ಟು |
|---|---|---|---|---|---|---|---|---|---|
| 1 | ಕೃಷಿ ಆಯುಕ್ತಾಲಯ (2401-00-001-1-01) | 13.31 | 8.95 | 0.50 | 3.82 | 14.85 | 5.02 | 5.14 | 51.60 |
| 2 | ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ (2401-00-001-1-75) | 1.33 | 6.66 | 0.00 | 1.52 | 0.00 | 0.00 | 9.99 | 19.50 |
| 3 | ಕೃಷಿ ಭಾಗ್ಯ 2401-00-102-0-28 | 0.00 | 0.00 | 0.00 | 0.00 | 0.00 | 0.00 | 0.00 | 0.00 |
| 4 | ರೈತರ ಪ್ರೋತ್ಸಾಹ & ಬೆಂಬಲ ಯೋಜನೆಗಳು (2401-00-102-0-28) | 1.18 | 1.02 | 0.20 | 0.66 | 1.12 | 0.30 | 0.39 | 4.85 |
| 5 | ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ (2401-00-103-0-15) | 39.95 | 211.31 | 133.60 | 113.11 | 141.95 | 269.91 | 226.10 | 1135.93 |
| 6 | ಸಾವಯವ ಕೃಷಿ (2401-00-104-0-12) | 0.00 | 0.00 | 0.00 | 0.00 | 0.00 | 0.00 | 0.00 | 0.00 |
| 7 | ಕೃಷಿ ವಿಸ್ತರಣೆ ಮತ್ತು ತರಬೇತಿ (2401-00-109-0-21) | 12.16 | 23.14 | 11.99 | 23.24 | 35.11 | 17.47 | 24.53 | 147.66 |
| 8 | ಕೃಷಿ ಮೂಲಭೂತ ಸೌಕರ್ಯ (4401-00-001-1-01) | 0.00 | 0.00 | 0.00 | 0.00 | 0.00 | 0.00 | 0.00 | 0.00 |
| | **ರಾಜ್ಯ ವಲಯ ಯೋಜನೆಗಳ - ಒಟ್ಟು** | **67.93** | **251.07** | **146.30** | **142.36** | **193.03** | **292.70** | **266.15** | **1359.53** |
| **II** | **ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು** | 0.00 | 0.70 | 1.30 | 3.75 | 2.65 | 3.00 | 3.60 | 15.00 |
| **III** | **ಕೇಂದ್ರ ವಲಯ/ಪುರಸ್ಕೃತ ಯೋಜನೆಗಳು** | | | | | | | | |
| 1 | ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ (2401-00-102-0-08) | 12.33 | 23.39 | 6.22 | 9.51 | 9.25 | 45.81 | 41.51 | 148.02 |
| 2 | NMSA-ಮುಖ್ಯಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆ (2401-00-108-1-15) | 67.81 | 417.10 | 144.98 | 303.56 | 588.44 | 834.96 | 824.97 | 3181.83 |
| 3 | NMSA - ಇತರೆ ಘಟಕಗಳು-2401-00-108-1-16 | 0.00 | 0.00 | 0.00 | 0.00 | 0.00 | 0.00 | 0.00 | 0.00 |
| 4 | ಕೃಷಿ ವಿಸ್ತರಣೆ ಉಪ ಅಭಿಯಾನ (SMAE)-2401-00-109-0-34 | 0.00 | 0.00 | 0.00 | 0.00 | 0.00 | 0.00 | 0.00 | 0.00 |
| 5 | ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM)2401-00-113-0-02 | 33.30 | 203.51 | 87.32 | 114.45 | 160.62 | 260.40 | 235.35 | 1094.96 |
| 6 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY) (2401-00-800-1-57) | 82.28 | 10.15 | 15.60 | 21.58 | 18.51 | 31.38 | 12.99 | 192.50 |
| 7 | ಮಣ್ಣಿನ ಫಲವತ್ತತೆಯ ಯೋಜನೆ/ಮಣ್ಣು ಆರೋಗ್ಯ ಚೀಟಿ & ನಿರ್ವಹಣೆ (Soil Health Card/Management)-2402-00-101-0-03 | 0.59 | 4.66 | 3.14 | 5.56 | 6.64 | 7.20 | 8.16 | 35.96 |
| | **ಕೇಂದ್ರ ವಲಯ/ಪುರಸ್ಕೃತ ಯೋಜನೆಗಳು - ಒಟ್ಟು** | **196.31** | **658.82** | **257.26** | **454.67** | **783.47** | **1179.76** | **1122.99** | **4653.27** |
| | **ಎಲ್ಲಾ ಒಟ್ಟು** | **264.24** | **910.59** | **404.86** | **600.77** | **979.15** | **1475.46** | **1392.74** | **6027.80** |

LAQ -1446 ಅನುಬಂಧ -1

## 2021-22ನೇ ಸಾಲಿನಲ್ಲಿ ಕೃಷಿ ಕ್ಷೇತ್ರದ ಅಭಿವೃದ್ಧಿ ನಿರ್ವಹಣೆ ಹಾಗೂ ಕಾರ್ಯಚಟುವಟಿಕೆಗಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಬಿಡುಗಡೆಗೊಂಡಿರುವ ಅನುದಾನದ ವಿವರ (ರೂ.ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆ ಮತ್ತು ಲೆಕ್ಕ ಶೀರ್ಷಿಕೆ | ಶಿವಮೊಗ್ಗ ನಗರ | ಶಿವಮೊಗ್ಗ ಗ್ರಾಮಾಂತರ | ಭದ್ರಾವತಿ | ತೀರ್ಥಹಳ್ಳಿ | ಸಾಗರ | ಶಿಕಾರಿಪುರ | ಸೊರಬ | ಒಟ್ಟು |
|---|---|---|---|---|---|---|---|---|---|
| 1 | ಕೃಷಿ ಆಯುಕ್ತಾಲಯ (2401-00-001-1-01) | 26.67 | 9.91 | 8.19 | 7.52 | 8.76 | 0.00 | 0.90 | 61.95 |
| 2 | ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ (2401-00-001-1-75) | 2.03 | 12.31 | 4.00 | 4.33 | 0.99 | 17.52 | 12.68 | 53.87 |
| 3 | ಕೃಷಿ ಭಾಗ್ಯ 2401-00-102-0-28 | 0.00 | 0.00 | 0.00 | 0.00 | 0.00 | 0.00 | 0.00 | 0.00 |
| 4 | ರೈತರ ಪ್ರೋತ್ಸಾಹ & ಬೆಂಬಲ ಯೋಜನೆಗಳು (2401-00-102-0-28) | 0.08 | 0.49 | 0.20 | 0.48 | 0.75 | 0.50 | 0.36 | 2.85 |
| 5 | ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ (2401-00-103-0-15) | 63.31 | 238.72 | 74.46 | 105.11 | 77.05 | 328.83 | 224.43 | 1111.90 |
| 6 | ಸಾವಯವ ಕೃಷಿ (2401-00-104-0-12) | 0.00 | 0.00 | 0.00 | 0.00 | 0.00 | 0.00 | 0.00 | 0.00 |
| 7 | ಕೃಷಿ ವಿಸ್ತರಣೆ ಮತ್ತು ತರಬೇತಿ (2401-00-109-0-21) | 16.62 | 28.10 | 29.33 | 25.42 | 37.82 | 18.99 | 25.35 | 181.62 |
| 8 | ಕೃಷಿ ಮೂಲಭೂತ ಸೌಕರ್ಯ (4401-00-001-1-01) | 1.40 | 7.00 | 0.00 | 1.60 | 0.00 | 0.00 | 10.00 | 20.00 |
|  | **ರಾಜ್ಯ ವಲಯ ಯೋಜನೆಗಳ - ಒಟ್ಟು** | 110.10 | 296.54 | 116.17 | 144.45 | 125.37 | 365.84 | 273.72 | 1432.19 |
| II | **ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು** | 0.00 | 0.53 | 0.98 | 3.90 | 3.45 | 3.00 | 3.15 | 15.00 |
| III | **ಕೇಂದ್ರ ವಲಯ/ಪುರಸ್ಕೃತ ಯೋಜನೆಗಳು** | 0.00 | 0.00 | 0.00 | 0.00 | 0.00 | 0.00 | 0.00 | 0.00 |
| 1 | ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ (2401-00-102-0-08) | 19.24 | 29.12 | 6.85 | 10.96 | 9.21 | 71.02 | 40.46 | 186.85 |
| 2 | NMSA-ಮುಖ್ಯಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆ (2401-00-108-1-15) | 48.41 | 287.33 | 84.14 | 247.61 | 268.36 | 531.48 | 618.19 | 2085.51 |
| 4 | ಕೃಷಿ ವಿಸ್ತರಣೆ ಉಪ ಅಭಿಯಾನ (SMAE)-2401-00-109-0-34 | 0.00 | 0.00 | 0.00 | 0.00 | 0.00 | 0.00 | 0.00 | 0.00 |
| 5 | ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM)2401-00-113-0-02 | 40.20 | 240.16 | 91.29 | 168.78 | 171.06 | 323.92 | 278.85 | 1314.27 |
| 6 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY) (2401-00-800-1-57) | 2.69 | 23.15 | 30.84 | 6.78 | 10.16 | 30.24 | 22.20 | 126.06 |
| 7 | ಮಣ್ಣಿನ ಫಲವತ್ತತೆಯ ಯೋಜನೆ/ಮಣ್ಣು ಆರೋಗ್ಯ ಚೀಟಿ & ನಿರ್ವಹಣೆ (Soil Health Card/Management)-2402-00-101-0-03 | 0.00 | 0.00 | 0.00 | 0.00 | 0.00 | 0.00 | 0.00 | 0.00 |
|  | ಕೇಂದ್ರ ವಲಯ/ಪುರಸ್ಕೃತ ಯೋಜನೆಗಳು - ಒಟ್ಟು | **110.53** | **579.76** | **213.12** | **434.14** | **458.78** | **956.66** | **959.70** | **3712.69** |
|  | ಎಲ್ಲಾ ಒಟ್ಟು | **220.63** | **876.82** | **330.27** | **582.50** | **587.60** | **1325.50** | **1236.56** | **5159.88** |

ಕೃಷಿ ನಿರ್ದೇಶಕರು

## ಅನುಬಂಧ-2(LCQ-1446)

## ಶಿವಮೊಗ್ಗ ಜಿಲ್ಲೆಗೆ ಬಿಡುಗಡೆಗೊಂಡ ಅನುದಾನದಲ್ಲಿ ಕೈಗೊಂಡ ಕಾರ್ಯಕ್ರಮಗಳ ಸಂಕ್ಷಿಪ್ತ ವಿವರ

**1. ಪ್ರಮಾಣಿತ /ಗುಣಮಟ್ಟದ ಬಿತ್ತನೆ ಬೀಜ ವಿತರಣೆ:** ಜಿಲ್ಲೆಯ ಎಲ್ಲಾ ವರ್ಗದ ರೈತರಿಗೆ ಮುಖ್ಯ ಬೆಳೆಗಳ ಹೈಬ್ರಿಡ್, ಅಧಿಕ ಇಳುವರಿ ತಳಿಗಳ ಉತ್ತಮ ಗುಣಮಟ್ಟದ ಪ್ರಮಾಣಿತ ಹಾಗೂ ನಿಜಚೀಟಿ ಬಿತ್ತನೆ ಬೀಜಗಳನ್ನು ಮುಂಗಾರು ಮತ್ತು ಹಿಂಗಾರು/ ಬೇಸಿಗೆ ಹಂಗಾಮುಗಳಲ್ಲಿ ರಿಯಾಯಿತಿ ದರದಲ್ಲಿ (ಸಾಮಾನ್ಯ - 50% ಮತ್ತುಪರಿಶಿಷ್ಟಜಾತಿ/ ಪರಿಶಿಷ್ಟಪಂಗಡ 75%) ಸಕಾಲದಲ್ಲಿ ರೈತರಿಗೆ ಒದಗಿಸಿ ಅಧಿಕ ಇಳುವರಿ ಪಡೆಯಲು ನೆರವಾಗುತ್ತದೆ.

**2. ಸಸ್ಯ ಸಂರಕ್ಷಣಾ ಕಾರ್ಯಕ್ರಮ:** ಬೆಳೆಗಳಲ್ಲಿ ಬಾಧಿಸುವ ಕೀಟ/ ರೋಗ ನಿರ್ವಹಣೆಗೆ ತುರ್ತು ಸಸ್ಯ ಸಂರಕ್ಷಣಾ ಕಾರ್ಯ ಕೈಗೊಳ್ಳಲು ರೈತರಿಗೆ ಶೇ.50 ರಿಯಾಯಿತಿ ದರದಲ್ಲಿ ಈಕೆಳಕಂಡ ಪರಿಕರಗಳನ್ನುಒದಗಿಸಲಾಗುವುದು.

ಅ) ಜೈವಿಕ ಪೀಡೆನಾಶಕ ಮತ್ತು ಜೈವಿಕ ನಿಯಂತ್ರಣಕಾರಕಗಳವಿತರಣೆ

ಆ) ಅವಶ್ಯಕತೆಗೆ ಅನುಗುಣವಾಗಿ ಕೀಟ ಹಾಗೂ ರೋಗ ನಿರ್ವಹಣೆಗೆ ಪೀಡೆನಾಶಕಗಳ ವಿತರಣೆ

ಇ) ಬೀಜೋಪಚಾರ ಹಾಗೂ ಸುರಕ್ಷಿತ ಕೀಟನಾಶಕಗಳ ಬಳಕೆ ಕುರಿತು ತರಬೇತಿ/ ಆಂದೋಲನ ಕಾರ್ಯಕ್ರಮ.

**3. ಮಣ್ಣಿನ ಸತ್ವ ಹೆಚ್ಚಿಸುವಿಕೆ ಕಾರ್ಯಕ್ರಮ:** ಮಣ್ಣಿನ ಫಲವತ್ತತೆ ಹೆಚ್ಚಿಸಲು ಹಾಗೂ ರೈತರ ಆರ್ಥಿಕ ಮಟ್ಟ ಸುಧಾರಿಸುವುದು ಈ ಯೋಜನೆಯ ಮೂಲ ಉದ್ದೇಶ. ಈ ಯೋಜನೆಯಡಿ ಕೃಷಿ ಪರಿಕರಗಳನ್ನು(ಹಸಿರೆಲೆಗೊಬ್ಬರಬೀಜ, ಜಿಪ್ಸಂ/ ಕೃಷಿಸುಣ್ಣ/ ಡೋಲೋಮೈಟ್, ಲಘು ಪೋಷಕಾಂಶಗಳು, ಎರೆಹುಳುಗೊಬ್ಬರ, ಸಿಟಿ ಕಾಂಪೋಸ್ಟ್, ಸಾವಯವ ಗೊಬ್ಬರ, ರಂಜಕಯುಕ್ತ ಸಾವಯವ ಗೊಬ್ಬರ (PROM), ಖಾದ್ಯವಲ್ಲದ ಎಣ್ಣೆ ರಹಿತ ಹಿಂಡಿ ಗೊಬ್ಬರ (ಬೇವು) ಗಳನ್ನುಸಾಮಾನ್ಯ-50% ಮತ್ತು ಪರಿಶಿಷ್ಟಜಾತಿ/ ಪರಿಶಿಷ್ಟಪಂಗಡ 75% ವಿತರಣೆಮಾಡಲಾಗುವುದು.

**4. ಕೇಂದ್ರ ಪುರಸ್ಕೃತ ಕೃಷಿ ಯಾಂತ್ರೀಕರಣ ಉಪ ಅಭಿಯಾನ:** ಕೃಷಿ ಕಾರ್ಮಿಕರ ಕೊರತೆ ಸಮಸ್ಯೆಯನ್ನು ನೀಗಿಸಿ, ಕೃಷಿ ಚಟುವಟಿಕೆಗಳ ಶ್ರಮದಾಯಕ ದುಡಿಮೆಯನ್ನು ತಗ್ಗಿಸಿ ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳುವ ಉದ್ದೇಶದಿಂದ (ಸಣ್ಣಟ್ರ್ಯಾಕ್ಟರ್, ಪವರ್ ಟಿಲ್ಲರ್, ಭೂಮಿ ಸಿದ್ಧತೆ ಉಪಕರಣಗಳು, ಬಿತ್ತನೆ/ ನಾಟಿ ಉಪಕರಣಗಳು, ಅಂತರ ಬೇಸಾಯ ಉಪಕರಣಗಳು, ಡೀಸೆಲ್ ಪಂಪ್ಸೆಟ್, ಟ್ರ್ಯಾಕ್ಟರ್/ ಟಿಲ್ಲರ್/ ಇಂಜಿನ್ ಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳು ಹಾಗೂ ಕೃಷಿ ಸಂಸ್ಕರಣೆಗೆ ಉಪಯುಕ್ತವಾಗುವ ವಿವಿಧ ಮಾದರಿಯ ಕೃಷಿ ಯಂತ್ರೋಪಕರಣಗಳನ್ನು) ಸಾಮಾನ್ಯ ರೈತರಿಗೆ ಶೇ.50 ಸಹಾಯಧನ ಹಾಗೂ ಪ.ಜಾತಿ/ ಪ. ಪಂಗಡ ರೈತರಿಗೆ ಶೇ.90 ಸಹಾಯಧನದಡಿ ಘಟಕಗಳನ್ನುಒದಗಿಸಲಾಗುತ್ತಿದೆ.

**5. ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆ:** ಕೃಷಿ ಉತ್ಪನ್ನಗಳನ್ನು ಸಂಸ್ಕರಣೆಗೆ ಒಳಪಡಿಸಿ ಗುಣಮಟ್ಟದ ಉತ್ಪನ್ನಗಳನ್ನು ರೈತರಿಗೆ ಹಾಗೂ ಬಳಕೆದಾರರಿಗೆ ಒದಗಿಸುವ ಉದ್ದೇಶದಿಂದ ಕೃಷಿಸಂಸ್ಕರಣೆ ಘಟಕಗಳಾದ- ಹಿಟ್ಟಿನ ಗಿರಣಿ, ಸಣ್ಣರೈಸ್ ಮಿಲ್, ಎಣ್ಣೆ ತೆಗೆಯುವ ಯಂತ್ರ, ರಾಗಿ ಕ್ಲೀನಿಂಗ್ ಮೇಷಿನ್, ಶುಗರ್ ಕೇನ್ ಕ್ರಷಿಂಗ್ ಯುನಿಟ್ (ಬೆಲ್ಲದಗಾಣ), ಪಲ್ವರೈಸರ್ ಗಳು ಹಾಗೂ ರೈತರು ಸಕಾಲದಲ್ಲಿ ಕೃಷಿ ಉತ್ಪನ್ನಗಳನ್ನು ಒಣಗಿಸಲು ಐದು ಪದರಗಳುಳ್ಳ 250 GSM-HDPE ಕಪ್ಪುಬಣ್ಣದ (8ಮೀ*6ಮೀಅಳತೆ) ಟಾರ್ಪಲಿನ್ ಗಳನ್ನು ವಿತರಿಸಲು ಕೃಷಿ ಉತ್ಪನ್ನಗಳ ಸಂಸ್ಕರಣೆ

ಕಾರ್ಯಕ್ರಮವನ್ನುಸಾಮಾನ್ಯ ರೈತರಿಗೆ ಶೇ.50 ರಿಯಾಯಿತಿ ಹಾಗೂ ಪ.ಜಾತಿ/ ಪ.ಪಂಗಡ ರೈತರಿಗೆ ಶೇ.90 ಸಹಾಯಧನದಡಿ ಘಟಕಗಳನ್ನು ಒದಗಿಸಲಾಗುತ್ತಿದೆ.

**6. ಕೃಷಿ ಯಂತ್ರಧಾರೆ (ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರ:** ರೈತರು ತಮಗೆ ಬೇಕಾದ ಸಮಯದಲ್ಲಿ ಅವಶ್ಯವಿರುವ ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆ ರೂಪದಲ್ಲಿ ಪಡೆದು ಕೃಷಿ ಯಂತ್ರೋಪಕರಣಗಳ ಪರಿಪೂರ್ಣ ಸಾಮರ್ಥ್ಯವನ್ನು ಕೃಷಿ ಬಳಕೆಗೆ ಉಪಯೋಗಿಸಿಕೊಂಡು ಆರ್ಥಿಕ ಮಟ್ಟವನ್ನು ಸುಧಾರಿಸಿಕೊಳ್ಳಲು ಸಹಾಯಕವಾಗಿದೆ.

ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರ ಯೋಜನೆಯಡಿ ಸಕಾಲದಲ್ಲಿ ಹಾಗೂ ಕಡಿಮೆ ಬಾಡಿಗೆ ದರದಲ್ಲಿ ಕೃಷಿ ಯಂತ್ರೋಪಕರಣಗಳ ತಯಾರಕ ಸಂಸ್ಥೆಗಳ ಮೂಲಕ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳನ್ನು ಹೋಬಳಿ ಮಟ್ಟದಲ್ಲಿ ಸ್ಥಾಪಿಸಲಾಗಿದೆ.

**7. ಸೂಕ್ಷ್ಮ ನೀರಾವರಿ ಯೋಜನೆ:** ರೈತರಲ್ಲಿ ನೀರಿನ ಮಿತ ಬಳಕೆ ಮಾಡುವಂತೆ ಪ್ರೋತ್ಸಾಹಿಸುವುದೇ ಈಯೋಜನೆಯ ಮುಖ್ಯ ಉದ್ದೇಶ. ಈ ಕಾರ್ಯಕ್ರಮದಡಿ ನೀರಾವರಿ ಘಟಕಗಳಾದ ತುಂತುರು / ಹನಿ ನೀರಾವರಿ ಘಟಕಗಳನ್ನು ಅಳವಡಿಸಿಕೊಳ್ಳಲು ಎಲ್ಲಾ ವರ್ಗದ ರೈತರಿಗೆ 2 ಹೆಕ್ಟೇರ್ ಪ್ರದೇಶದವರೆಗೆ ಶೇ.90 ಸಹಾಯಧನ ಒದಗಿಸಲಾಗುವುದು.

**8. ಸಮಗ್ರ ಕೃಷಿ ಅಭಿಯಾನ- ಇಲಾಖೆಗಳ ನಡಿಗೆ ರೈತರ ಮನೆ ಬಾಗಿಲಿಗೆ:** ಮುಂಗಾರು ಹಂಗಾಮು ಪೂರ್ವದಲ್ಲಿ ರೈತರಿಗೆ ಕೃಷಿಯನ್ನು ಹೆಚ್ಚು ಲಾಭದಾಯಕವಾಗಿ ಮಾಡಲು ಕೃಷಿ ಮತ್ತು ಕೃಷಿ ಸಂಬಂಧಿತ ಇಲಾಖೆಗಳ ಸಮನ್ವಯದೊಂದಿಗೆ ಸಮಗ್ರ ಕೃಷಿ ಮಾಹಿತಿಯನ್ನು ರೈತರಿಗೆ ತಲುಪಿಸುವುದು, ಉತ್ಪಾದಕತೆ ಹೆಚ್ಚಿಸುವ ತಾಂತ್ರಿಕತೆಗಳ ಮನವರಿಕೆ ಮಾಡುವುದು, ವಿಜ್ಞಾನಿಗಳೊಂದಿಗೆ ರೈತರ ಸಂವಾದ ವಿವಿಧ ಕೃಷಿ ಚಟುವಟಿಕೆಗಳ ಕುರಿತು ಗ್ರಾಮ ಪಂಚಾಯಿತಿ ಮತ್ತು ಹೋಬಳಿ ಮಟ್ಟದಲ್ಲಿ ಅರಿವು ಮೂಡಿಸುವುದು ಹಾಗೂ ಮಾಹಿತಿ ಒದಗಿಸುವ ಕಾರ್ಯಕ್ರಮವಾಗಿರುತ್ತದೆ.

**9. ಕರ್ನಾಟಕ ರಾಜ್ಯ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ:** ಅನಿಶ್ಚಿತ ಕೃಷಿಯಲ್ಲಿ (ಅತಿವೃಷ್ಟಿ, ಅನಾವೃಷ್ಟಿ, ಅಕಾಲಿಕ ಮಳೆ ಮುಂತಾದ ಪ್ರಕೃತಿವಿಕೋಪ) ನಿಶ್ಚಿತ ಆದಾಯ ತರುವ ಉದ್ದೇಶದಿಂದ ಅಗ್ರಿಕಲ್ಚರ್ ಇನ್ಸುರೆನ್ಸ್ ಕಂಪನಿ ಇವರ ಸಹಯೋಗದಿಂದ ಹೋಬಳಿ ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಯೋಜನೆಯನ್ನು ಅನುಷ್ಠಾನ ಮಾಡಲಾಗುವುದು. (ಹೋಬಳಿ ಮಟ್ಟಕ್ಕೆ ರಾಗಿ-ಮಳೆ ಆಶ್ರಿತ ಹಾಗೂ ಜೋಳ-ಮಳೆಆಶ್ರಿತ ಮತ್ತು ಗ್ರಾಮ ಪಂಚಾಯಿತಿ ಮಟ್ಟಕ್ಕೆ ಭತ್ತ-ನೀರಾವರಿ, ಭತ್ತ-ಮಳೆಆಶ್ರಿತ, ಮುಸುಕಿನಜೋಳ-ನೀರಾವರಿ, ಮುಸುಕಿನಜೋಳ-ಮಳೆಆಶ್ರಿತ) ಈ ಬೆಳೆಗಳಿಗೆ ಬೆಳೆ ಸಾಲ ಪಡೆದ ರೈತರು (ಇಚ್ಛೆಪಡದೇ ಇದ್ದಲ್ಲಿ ಬೆಳೆ ನೋಂದಣಿ ಅಂತಿಮ ದಿನಾಂಕಕ್ಕೆ 7 ದಿವಸಗಳ ಮುಂಚಿತವಾಗಿ ಲಿಖಿತ ಮುಚ್ಚಳಿಕೆ ನೀಡಿದಲ್ಲಿ ಬೆಳೆ ವಿಮೆ ಯೋಜನೆಯಿಂದ ಕೈ ಬಿಡಲಾಗುವುದು) ಮತ್ತು ಸಾಲ ಪಡೆಯದ ರೈತರು ಅರ್ಜಿಯೊಂದಿಗೆ ಪಹಣಿ/ ಪಾಸ್ ಪುಸ್ತಕ/ ಕಂದಾಯ ರಶೀದಿ ನೀಡಿ ಬೆಳೆವಿಮೆಗೆ ನೊಂದಾಯಿಸಬಹುದಾಗಿದೆ.

**10. ಬೆಳೆ ಸಮೀಕ್ಷೆ:** ಬೆಳೆ ಸಮೀಕ್ಷೆ ಚಟುವಟಿಕೆಗಳಿಂದ ಸೆರೆಹಿಡಿಯಲಾದ ದತ್ತಾಂಶವನ್ನು ಸರ್ಕಾರದ ವಿವಿಧ ಯೋಜನೆಗಳಲ್ಲಿ ಕನಿಷ್ಠ ಬೆಂಬಲಬೆಲೆ, ಸಬ್ಸಿಡಿ ಪಾವತಿ, ಬೆಳೆ ಪ್ರದೇಶದ ಅಂದಾಜು, ಕೃಷಿ ಮತ್ತು ತೋಟಗಾರಿಕೆ ಯೋಜನೆಗಳ ಅಡಿಯಲ್ಲಿ ಫಲಾನುಭವಿಗಳ ಆಯ್ಕೆ ಮುಂತಾದವುಗಳಿಗೆಬಳಸುವುದು. ರೈತರು ತಮ್ಮ ಜಮೀನುಗಳ ಸರ್ವೆ ನಂಬರ್, ಹಿಸ್ಸಾ ನಂಬರ್‌ವಾರು ತಾವು ಬೆಳೆದ ಕೃಷಿ, ತೋಟಗಾರಿಕೆ, ಅರಣ್ಯ ಹಾಗೂ ಇನ್ನಿತರ ಬೆಳೆಗಳ ಮಾಹಿತಿಯನ್ನು ಛಾಯಾಚಿತ್ರ ಸಹಿತ ಸ್ವತಃ ತಾವೇ ಬೆಳೆ ಸಮೀಕ್ಷೆ ಮೊಬೈಲ್‌ಆಪ್ ಮೂಲಕ ದಾಖಲಿಸಬಹುದಾಗಿದೆ. ರೈತರು ರೈತರ ಬೆಳೆ ಸಮೀಕ್ಷೆ*"Kharif Season Farmer Crop Survey 2022-23"*ಮೊಬೈಲ್ ಆಪ್

ಅನ್ನುತಮ್ಮ ಆಂಡ್ರಾಯ್ಡ್ ಮೊಬೈಲ್‌ನ ಗೂಗಲ್ ಸ್ಟೋರ್ ನಿಂದ ಅಥವಾ https://play.google.com/store/apps/details?id=com.csk. khariffarmer22 23. cropsurvey ಲಿಂಕ್ ಬಳಸಿ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿದೆ.

**11. ಕೃಷಿ ಪ್ರಶಸ್ತಿ:** ಕೃಷಿ ಕ್ಷೇತ್ರದಲ್ಲಿ ಉತ್ಪಾದಕತೆ ಹೆಚ್ಚಿಸಲು, ರೈತರಲ್ಲಿ ಒಂದು ಆರೋಗ್ಯಕರ ಸ್ಪರ್ಧಾ ಮನೋಭಾವವನ್ನು ಉಂಟು ಮಾಡಿ ಹೆಚ್ಚು ಇಳುವರಿ ಪಡೆದ ರೈತರಿಗೆ (ರಾಜ್ಯ ಮಟ್ಟದಲ್ಲಿ ವಿಜೇತರಾದ ರೈತರಿಗೆ ಪ್ರಥಮ- ರೂ.50000/-, ದ್ವಿತೀಯ-ರೂ.40000/-, ಹಾಗೂ ತೃತೀಯ-ರೂ35000/- ಜಿಲ್ಲಾ ಮಟ್ಟದಲ್ಲಿ ಪ್ರಥಮ- ರೂ30000/-, ದ್ವಿತೀಯ- ರೂ25000/-, ಹಾಗೂತೃತೀಯ-ರೂ20000/-, ಮುಂದುವರೆದು ತಾಲ್ಲೂಕು ಮಟ್ಟದಲ್ಲಿ ಪ್ರಥಮ- ರೂ15000/-, ದ್ವಿತೀಯ- ರೂ10000/- ಹಾಗೂ ತೃತೀಯ-ರೂ.5000/-ಬಹುಮಾನ ಮೂಲಕ ಉತ್ತೇಜನ ನೀಡುವ ಒಂದು ಕಾರ್ಯಕ್ರಮವಾಗಿದೆ.

**12. ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ:** ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಲ್ಲಿ ವಾರ್ಷಿಕವಾಗಿ ರೂ.6000/-ಗಳನ್ನು ಅರ್ಹ ರೈತ ಫಲಾನುಭವಿಗಳಿಗೆ 3 ಕಂತುಗಳಲ್ಲಿ ನೀಡಲಾಗುತ್ತಿದ್ದು, ದಿನಾಂಕ 14-08-2019 ರಿಂದ ರಾಜ್ಯ ಸರ್ಕಾರವೂ ಹೆಚ್ಚುವರಿಯಾಗಿ ವಾರ್ಷಿಕರೂ.4000 ರಂತೆ ಎರಡು ಕಂತುಗಳಲ್ಲಿ ನೇರ ನಗದು ವರ್ಗಾವಣೆ (ಡಿಬಿಟಿ) ಮೂಲಕ ಒಟ್ಟುರೂ 10000/- ಗಳನ್ನು ರೈತರಿಗೆ ಕೃಷಿ ಉತ್ತೇಜನಗಾಗಿ ನೀಡಲಾಗುತ್ತಿದೆ.

**13. ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ:** ಈ ಯೋಜನೆಯಡಿ ಅಕ್ಕಿ, ದ್ವಿದಳಧಾನ್ಯ, ಎಣ್ಣೆಕಾಳು ಬೆಳೆಗಳಲ್ಲಿ ಇಳುವರಿ ಹೆಚ್ಚಿಸುವ ಸಲುವಾಗಿ ನಿರ್ದಿಷ್ಟ ನವೀನ ತಾಂತ್ರಿಕತೆಯ ಗುಚ್ಛ ಪ್ರಾತ್ಯಕ್ಷಿಕೆ (ರೂ 9000 ಪ್ರತಿಹೆಕ್ಟೇರ್) ಭತ್ತದಲ್ಲಿ ನೇರ ಬಿತ್ತನೆ/ ಯಾಂತ್ರೀಕೃತ ಸಾಲು ನಾಟಿ/ SRI ಪದ್ಧತಿಯ ತಾಂತ್ರಿಕತೆಯನ್ನು ನೀಡಲು ಅವಕಾಶವಿರುತ್ತದೆ, ಸಮಗ್ರಪೋಷಕಾಂಶ, ಸಮಗ್ರ ಪೀಡೆ ನಿರ್ವಹಣೆ, ನೀರಾವರಿ ಸಾಧನ, ಸ್ಥಳೀಯ ಪ್ರೇರಕಗಳು ಹಾಗೂ ಕೃಷಿ ಯಂತ್ರೋಪಕರಣಗಳನ್ನುಶೇ.50 ಸಹಾಯಧನದಲ್ಲಿ ಈ ಯೋಜನೆಯಡಿ ಒದಗಿಸಲಾಗುವುದು.

**14. ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯ (ಕೃಷಿಸಂಜೀವಿನಿ) ಕಾರ್ಯಕ್ರಮ**: ಕೀಟ, ರೋಗ ಬಾಧೆ ಮತ್ತು ಮಣ್ಣಿನ ಪೋಷಕಾಂಶ ಕೊರತೆ ಹಾಗೂ ಸಮರ್ಪಕ ನಿರ್ವಹಣೆ ಕುರಿತಂತೆ ರೈತರ ತಾಕುಗಳಲ್ಲಿಯೇ ಹತೋಟಿ ಕ್ರಮಗಳ ಕುರಿತು ಮಾರ್ಗೋಪಾಯ ಒದಗಿಸಲು ರೈತರ ಸಹಾಯವಾಣಿ 155313 ಕ್ಕೆ ಉಚಿತ ಕರೆ ಮಾಡಿದಲ್ಲಿ ಕೃಷಿ ಸಂಜೀವಿನಿ ವಾಹನವು ತಾಂತ್ರಿಕ ಸಿಬ್ಬಂದಿಗಳೊಂದಿಗೆ ರೈತರ ತಾಕುಗಳಿಗೆ ಭೇಟಿ ನೀಡಿ ಸಲಹೆ ನೀಡಲಾಗುತ್ತದೆ. ಇಲಾಖಾ ವೆಬ್ಸೈಟ್- https://raitamitra.karnataka.gov.in ರೈತರ ಸಹಾಯವಾಣಿ ಕೇಂದ್ರ ದೂರವಾಣಿ ಸಂಖ್ಯೆ: 18004253553 ಕೃಷಿ ಸಂಜೀವಿನಿ ರೈತರ ಉಚಿತ ಸಹಾಯವಾಣಿ: 155313

**16. ಮುಖ್ಯಮಂತ್ರಿರೈತವಿದ್ಯಾನಿಧಿಕಾರ್ಯಕ್ರಮ:** ಅನ್ನದಾತರ ಮಕ್ಕಳ ಉನ್ನತ ವ್ಯಾಸಂಗಕ್ಕೆ ಉದಾತ್ತ ನೆರವು ನೀಡಲು ರಾಜ್ಯದ ರೈತಾಪಿ ಮಕ್ಕಳ ಉನ್ನತ ವ್ಯಾಸಂಗಕ್ಕೊಂದು ವರದಾನ ಎಂಬ ವಿಶಿಷ್ಟ ಕಾರ್ಯಕ್ರಮದಡಿ10ನೇತರಗತಿ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರೈಸಿದ ರೈತರ ಮಕ್ಕಳ ಮುಂದಿನ ವಿದ್ಯಾಭ್ಯಾಸದ ಕನಸು ಕೈಗೂಡಲು ಪ್ರತಿವರ್ಷ ಶಿಷ್ಯವೇತನ ಒದಗಿಸುವ ನೆರವಿನಲ್ಲಿ ಕೆಳಕಂಡಂತೆ ವಾರ್ಷಿಕ ಶಿಷ್ಯವೇತನವನ್ನು ರೈತರ ಮಕ್ಕಳ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ (ಡಿಬಿಟಿ) ಮೂಲಕ ಜಮೆ ಮಾಡಲಾಗುವುದು (ಹೆಚ್ಚಿನ ಮಾಹಿತಿಗಾಗಿ ರೈತ ಸಹಾಯವಾಣಿ1800 425 3553 ಗೆ ಉಚಿತ ಕರೆ ಮಾಡಿ).

| ಕೋರ್ಸ್ ಹೆಸರು/ ಕೋರ್ಸ್ ವಿಧಗಳು | ವಿದ್ಯಾರ್ಥಿಗಳು / ಪುರುಷರು | ವಿದ್ಯಾನಿಯರು/ ಅನ್ಯಲಿಂಗದವರು |
|---|---|---|
| ಪ್ರೌಢಶಿಕ್ಷಣ (8 ರಿಂದ10ನೇತರಗತಿ) | _ | ರೂ.2000/- ಹೆಣ್ಣು ಮಕ್ಕಳಿಗೆ ಮಾತ್ರ |
| ಪದವಿಯ ಮುಂಚೆ ಪಿ.ಯು.ಸಿ/ ಐ.ಟಿ.ಐ/ ಡಿಪ್ಲೋಮಾ | ರೂ 2500/- | ರೂ 3000/- |
| ಎಲ್.ಎಲ್.ಬಿ.ಎ/ ಬಿ. ಎಸ್. ಸಿ/ ಬಿ. ಕಾಂ. ಇತ್ಯದಿ (ಎಂ. ಬಿ. ಬಿ.ಎಸ್/ ಬಿ.ಇ/ ಬಿ. ಟೆಕ್ & ವೃತ್ತಿ ಪರ ಕೋರ್ಸ್ ಗಳು ಹೊರತುಪಡಿಸಿ) | ರೂ 5000/- | ರೂ 5500/- |
| ಎಲ್. ಎಲ್. ಬಿ/ ಪ್ಯಾರಾ ಮೆಡಿಕಲ್/ ಬಿ. ಫಾರ್ಮ್/ ನರ್ಸಿಂಗ್ಇತ್ಯಾದಿ. ವೃತಿ ಪರ ಕೋರ್ಸ್ ಗಳು | ರೂ 7500/- | ರೂ 8000/- |
| ಎಂ. ಬಿ.ಬಿ.ಎಸ್/ ಬಿ. ಇ/ ಬಿ.ಟೆಕ್ & ಎಲ್ಲಾ ಸ್ನಾತಕೋತ್ತರ ಕೋರ್ಸ್ ಗಳು | ರೂ 10000/- | ರೂ 11000/- |

**17. ರೈತರ ಆತ್ಮಹತ್ಯೆ, ಆಕಸ್ಮಿಕ ಮರಣ, ಬಣವೆ ಸುಟ್ಟ ಪ್ರಕರಣಗಳಿಗೆ ಪರಿಹಾರ:**

ರೈತರ ಆತ್ಮಹತ್ಯೆ – ರೂ 5.00 ಲಕ್ಷ,
ಆಕಸ್ಮಿಕ ಮರಣ – ರೂ 2.00 ಲಕ್ಷ
ಬಣವೆ ಸುಟ್ಟ ಪ್ರಕರಣ – ರೂ 20000 ದವರೆಗೆ

**18. ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು:**

ಆಧುನಿಕ ಕೃಷಿ ತಂತ್ರಜ್ಞಾನದ ಅಳವಡಿಕೆಯಲ್ಲಿ ರೈತರ, ರೈತ ಮಹಿಳೆಯರ ಮತ್ತು ವಿಸ್ತರಣಾ ಕಾರ್ಯಕರ್ತರ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶದಿಂದ ತರಬೇತಿ ನೀಡಲಾಗುವುದು.

**19.ಗುಣನಿಯಂತ್ರಣಕಾರ್ಯಕ್ರಮ:**

ರಸಗೊಬ್ಬರ, ಲಘುಪೋಷಕಾಂಶಗಳು, ಶೇ 100 ನೀರಿನಲ್ಲಿ ಕರಗುವ ಗೊಬ್ಬರಗಳು, ಎರೆಹುಳು ಗೊಬ್ಬರಗಳು, ಸಾವಯವ ಗೊಬ್ಬರಗಳು, ಸಿಟಿ ಕಾಂಪೋಸ್ಟ್, ರಂಜಕಯುಕ್ತ ಸಾವಯವ ಗೊಬ್ಬರ (PROM), ಖಾದ್ಯವಲ್ಲದ ಎಣ್ಣೆರಹಿತ ಹಿಂಡಿ ಗೊಬ್ಬರ (ಬೇವು, ಹರಳು,ಹತ್ತಿ),ಕೀಟನಾಶಕಗಳು, ರೋಗನಾಶಕಗಳು, ಕಳೆನಾಶಕಗಳು, ಬ್ಯಾಕ್ಟೀರಿಯನಾಶಕಗಳು, ನುಸಿನಾಶಕಗಳು (Acaricides), ದಂಶಕನಾಶಕಗಳು (Rodanticides)
ಬಿತ್ತನೆ ಬೀಜ (ಅಧಿನಿಯಮ ಮತ್ತು ಸೇವಾಮಾದರಿಗಳು)

**20. ಮಣ್ಣುಆರೋಗ್ಯಕೇಂದ್ರಗಳು: ಮಣ್ಣುಮತ್ತುನೀರುಪರೀಕ್ಷೆ:**

- ಮಣ್ಣು ಪರೀಕ್ಷೆ ಶುಲ್ಕ – ರೂ. 200/- 12 ಅಂಶಗಳನ್ನು ಪರೀಕ್ಷಿಸಲಾಗುವುದು
- ನೀರು ಪರೀಕ್ಷೆ ಶುಲ್ಕ – ರೂ. 100/- 12 ಅಂಶಗಳನ್ನು ಪರೀಕ್ಷಿಸಲಾಗುವುದು

ಕೃಷಿ ನಿರ್ದೇಶಕರು

## ಅನುಬಂಧ-3(LCQ-1446)

### ಶಿವಮೊಗ್ಗ ಜಿಲ್ಲೆಯಲ್ಲಿರುವ ರೈತ ಸಂಪರ್ಕ ಕೇಂದ್ರಗಳ ತಾಲ್ಲೂಕುವಾರು ವಿವರಗಳು

| ಕ್ರ.ಸಂ | ತಾಲ್ಲೂಕು | ರೈತ ಸಂಪರ್ಕ ಕೇಂದ್ರ |
|---|---|---|
| 1 | ಶಿವಮೊಗ್ಗ | ಕಸಬ |
| 2 | ಶಿವಮೊಗ್ಗ | ನಿಧಿಗೆ-1 |
| 3 | ಶಿವಮೊಗ್ಗ | ನಿಧಿಗೆ-2 |
| 4 | ಶಿವಮೊಗ್ಗ | ಹೊಳಲೂರು-1 |
| 5 | ಶಿವಮೊಗ್ಗ | ಬಿ.ಬೀರನಹಳ್ಳಿ |
| 6 | ಶಿವಮೊಗ್ಗ | ಕುಂಸಿ |
| 7 | ಶಿವಮೊಗ್ಗ | ಹಾರನಹಳ್ಳಿ |
| 8 | ಶಿವಮೊಗ್ಗ | ಆಯನೂರು |
| 9 | ಭದ್ರಾವತಿ | ಕಸಬ |
| 10 | ಭದ್ರಾವತಿ | ಹೊಳೆಹೊನ್ನೂರು-1 |
| 11 | ಭದ್ರಾವತಿ | ಅನವೇರಿ |
| 12 | ಭದ್ರಾವತಿ | ಕಲ್ಲಿಹಾಳ್ |
| 13 | ಭದ್ರಾವತಿ | ಕೂಡ್ಲಿಗೆರ |
| 14 | ಭದ್ರಾವತಿ | ಹಿರಿಯೂರು |
| 15 | ತೀರ್ಥಹಳ್ಳಿ | ಕಸಬ |
| 16 | ತೀರ್ಥಹಳ್ಳಿ | ತೂದೂರು |
| 17 | ತೀರ್ಥಹಳ್ಳಿ | ಮೇಗರವಳ್ಳಿ |
| 18 | ತೀರ್ಥಹಳ್ಳಿ | ದೇವಂಗಿ |
| 19 | ತೀರ್ಥಹಳ್ಳಿ | ಕೋಣಂದೂರು |
| 20 | ಸಾಗರ | ಕಸಬ |
| 21 | ಸಾಗರ | ಆನಂದಪುರ |
| 22 | ಸಾಗರ | ಆವಿನಹಳ್ಳಿ |
| 23 | ಸಾಗರ | ಅರಳಗೋಡು |
| 24 | ಸಾಗರ | ತುಮ್ರಿ |
| 25 | ಸಾಗರ | ತಾಳಗುಪ್ಪ |

| ಕ್ರ.ಸಂ | ತಾಲ್ಲೂಕು | ರೈತ ಸಂಪರ್ಕ ಕೇಂದ್ರ |
|---|---|---|
| 26 | ಹೊಸನಗರ | ಕಸಬ |
| 27 | ಹೊಸನಗರ | ರಿಪ್ಪನ್ ಪೇಟೆ |
| 28 | ಹೊಸನಗರ | ನಗರ |
| 29 | ಹೊಸನಗರ | ಹುಂಚಾ |
| 30 | ಶಿಕಾರಿಪುರ | ಕಸಬ |
| 31 | ಶಿಕಾರಿಪುರ | ಶಿರಾಳಕೊಪ್ಪ |
| 32 | ಶಿಕಾರಿಪುರ | ಹೊಸೂರು |
| 33 | ಶಿಕಾರಿಪುರ | ಸುಣ್ಣದ ಕೊಪ್ಪ |
| 34 | ಶಿಕಾರಿಪುರ | ಹಿತ್ತಲ |
| 35 | ಸೊರಬ | ಕಸಬ |
| 36 | ಸೊರಬ | ಆನವಟ್ಟಿ |
| 37 | ಸೊರಬ | ಚಂದ್ರುಗುತ್ತಿ |
| 38 | ಸೊರಬ | ಜಡೆ |
| 39 | ಸೊರಬ | ಕುಪ್ಪಗಡ್ಡೆ |
| 40 | ಸೊರಬ | ಉಳವಿ |

ಕೃಷಿ ನಿರ್ದೇಶಕರು